# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 804 |
| ಸದಸ್ಯರ ಹೆಸರು | ಶ್ರೀಮತಿ ಉಮಾಶ್ರೀ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 21-02-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ತೇರದಾಳ ಪಟ್ಟಣವನ್ನು ತಾಲ್ಲೂಕು ಎಂದು ಘೋಷಣೆ ಮಾಡಿ ಸುಮಾರು ಐದು ವರ್ಷಗಳಾದರೂ, ಇದುವರೆಗೂ ಹೊಸ ತಾಲ್ಲೂಕಿಗೆ ನೀಡಬೇಕಾದ ಹೊಸ ತಾಲ್ಲೂಕು ಕಛೇರಿಯನ್ನಾಗಿ, ಗ್ರೇಡ್-1 ತಹಶೀಲ್ದಾರ್ ಹಾಗೂ ಇತರೆ ಸಿಬ್ಬಂದಿಗಳನ್ನು ನಿಯೋಜಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ ತಾಲ್ಲೂಕಿಗೆ ನೀಡಬೇಕಾದ ಈ ಸೌಲಭ್ಯಗಳನ್ನು ನೀಡದಿರಲು ಕಾರಣವೇನು: (ಸ್ಪಷ್ಟವಾದ ವಿವರ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 39 ಎಲ್ಆರ್‌ಡಿ 2022, ದಿನಾಂಕ: 04-11-2022 ರಲ್ಲಿ ತೇರದಾಳ ಪಟ್ಟಣವನ್ನು ಹೊಸ ತಾಲ್ಲೂಕನ್ನಾಗಿ ಅಧಿಸೂಚಿಸಲಾಗಿದೆ. ಸದರಿ ಅಧಿಸೂಚನೆಯು ದಿನಾಂಕ: 09-11-2022 ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗುವುದರೊಂದಿಗೆ ಅಸ್ತಿತ್ವಕ್ಕೆ ಬಂದಿರುತ್ತದೆ.<br><br>ನೂತನ ತೇರದಾಳ ತಾಲ್ಲೂಕಿಗೆ ತಹಸೀಲ್ದಾರ್ ಗ್ರೇಡ್-2 ಹುದ್ದೆಯನ್ನು ಒಳಗೊಂಡಂತೆ ಒಟ್ಟು 12 ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.<br><br>ತೇರದಾಳ ತಾಲ್ಲೂಕಿಗೆ ತಹಸೀಲ್ದಾರ್ ಗ್ರೇಡ್-1 ಹುದ್ದೆಯನ್ನು ಮಂಜೂರು ಮಾಡಲು ಮನವಿಗಳು ಸ್ವೀಕೃತವಾಗಿವೆ. ಅದರಂತೆ, ಸದರಿ ಪ್ರಸ್ತಾವನೆಯನ್ನು ಮತ್ತೊಮ್ಮೆ ಆರ್ಥಿಕ ಇಲಾಖೆಗೆ ಕಳುಹಿಸಿ, ಆರ್ಥಿಕ ಇಲಾಖೆಯು ಸಹಮತಿ ನೀಡಿದಲ್ಲಿ ತಹಸೀಲ್ದಾರ್ ಗ್ರೇಡ್-1 ಹುದ್ದೆಯನ್ನು ಮಂಜೂರು ಮಾಡಲಾಗುವುದು. |
| ಆ) | ತೇರದಾಳ ತಾಲ್ಲೂಕಿಗೆ ಈ ಹಿಂದೆ ಗ್ರೇಡ್-1 ತಹಶೀಲ್ದಾರ್‌ರನ್ನು ನಿಯೋಜಿಸಲಾಗಿದ್ದು, ಸರ್ಕಾರವು ಇವರನ್ನು ಬದಲಿಸಿ ಗ್ರೇಡ್-2 ತಹಶೀಲ್ದಾರ್‌ರನ್ನು ನೇಮಿಸಲು ಕಾರಣವೇನು: | ಪ್ರಸ್ತುತ ತೇರದಾಳ ತಾಲ್ಲೂಕಿಗೆ ತಹಸೀಲ್ದಾರ್ ಗ್ರೇಡ್-2 ಅಧಿಕಾರಿಯನ್ನು ತಹಸೀಲ್ದಾರ್ ಗ್ರೇಡ್-1 ಹುದ್ದೆಯಲ್ಲಿ ನೇಮಿಸಲಾಗಿದೆ. |

| | | |
|---|---|---|
| ಇ) | ಯಾವ ಕಾಲಮಿತಿಯಲ್ಲಿ ಹೊಸ ತಾಲ್ಲೂಕಿಗೆ ನೀಡಬೇಕಾದ ಎಲ್ಲಾ ಇಲಾಖೆಯ ಕಛೇರಿ ಹಾಗೂ ಸಿಬ್ಬಂದಿಗಳನ್ನು ಮತ್ತು ಇತರೆ ಸೌಲಭ್ಯಗಳನ್ನು ನೀಡಲಾಗುವುದು? (ವಿವರ ನೀಡುವುದು) | ನೂತನ ತೇರದಾಳ ತಾಲ್ಲೂಕಿನಲ್ಲಿ ಕೆಳಕಂಡ ಕಚೇರಿಗಳು ಕಾರ್ಯ ನಿರ್ವಹಿಸುತ್ತಿವೆ.<br>1) ತಹಸೀಲ್ದಾರ್ ಕಚೇರಿ<br>2) ಮುಖ್ಯಾಧಿಕಾರಿ, ಪುರಸಭೆ<br>3) ಉಪ ನೊಂದಣಾಧಿಕಾರಿ ಕಚೇರಿ<br>4) ಹೆಸ್ಕಾಂ ಕಚೇರಿ<br>5) ಪ್ರಾಥಮಿಕ ಆರೋಗ್ಯ ಕೇಂದ್ರ<br>6) ಪಶು ವೈದ್ಯಾಧಿಕಾರಿ ಕಚೇರಿ<br>7) ರೈತ ಸಂಪರ್ಕ ಕೇಂದ್ರ<br>ಇನ್ನುಳಿದ ಇಲಾಖೆಗಳ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಅನುವಾಗುವಂತೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹುದ್ದೆಗಳನ್ನು ಸೃಜಿಸಿ ಹಂತ-ಹಂತವಾಗಿ ಕಚೇರಿಗಳನ್ನು ಪ್ರಾರಂಭಿಸಲು ಎಲ್ಲಾ ಇಲಾಖೆಗಳ ಅಪರ ಮುಖ್ಯ / ಪ್ರಧಾನ ಕಾರ್ಯದರ್ಶಿಗಳಿಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮೂಲಕ ಸೂಕ್ತ ನಿರ್ದೇಶನ ನೀಡಲಾಗಿದೆ. ಅದರಂತೆ, ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಆಯಾ ಇಲಾಖೆ ವತಿಯಿಂದ ಕಚೇರಿಗಳನ್ನು ಪ್ರಾರಂಭಿಸಬೇಕಾಗಿದೆ.<br>ತೇರದಾಳ ತಾಲ್ಲೂಕು ಕೇಂದ್ರದಲ್ಲಿ 'ತಾಲ್ಲೂಕು ಆಡಳಿತ ಸೌಧ' ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |

**ಸಂಖ್ಯೆ: ಕಂಇ 23 ಎಲ್‌ಆರ್‌ಡಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು